# ೮ನೇ ಭಾಗ.

## ಭೂಮಿ.

ಇಂಗ್ಲಿಷ ಸರಕಾರದ ಕೈಶೇರಿದ್ದು.—ವಿಜಾಪುರ, ಬೆಳಗಾವಿ, ಧಾರವಾಡ, ಈ ಮೂರು ಜಿಲ್ಲೆಗಳು ಮುಖ್ಯವಾಗಿ ಸನ್ ೧೮೧೮ರಲ್ಲಿ ಬಾಜೀ ರಾಯನು ಓಡಿ ಹೋದ ಬಳಿಕ ಇಂಗ್ಲಿಷ ಸರಕಾರಕ್ಕೆ ಶೇರಿದವು; ಕಾನಡಾ ಜಿಲ್ಲೆಯು ಸನ್ ೧೭೯೯ರಲ್ಲಿ ಟೀಪೂನ ರಾಜ್ಯದ ಭಾಗವಾಗಿ ಇಂಗ್ಲಿಷ ಸರಕಾರಕ್ಕೆ ಶೇರಿತು. ಕಾನಡಾ ಹೊರ್ತಾಗಿ ಉಳಿದ ಮೂರು ಜಿಲ್ಲೆಗಳಲ್ಲಿ ಕೆಲ ಕೆಲವು ಗ್ರಾಮಗಳು ಸನ್ ೧೮೧೮ರ ಈಚೆಯಲ್ಲಿ ಖಾಲಸಾತಿಗೆ ಬಂದವು. ಅವುಗಳ ವಿವರ—

ವಿಜಾಪುರ ಜಿಲ್ಲೆಯಲ್ಲಿ ಸನ್ ೧೮೩೬ರಲ್ಲಿ ಚಿಂಚಲಿಯ ಸಂಸ್ಥಾನಿಕನು ಸಂತತಿಯಿಲ್ಲದೆ ಸತ್ತದ್ದರಿಂದ ಅನವಾಲದ ಪರಗಣೆಯು ಖಾಲಸಾ ಆಯಿತು. ಸನ್ ೧೮೩೯ರಲ್ಲಿ ನಿಪಾಣಿಯ ದೇಸಾಯಿಯು ಸಂತತಿಯಿಲ್ಲದೆ ಸತ್ತದ್ದರಿಂದ ಗಲಗಲೆಯ ೧೫ ಹಳ್ಳಿಗಳು, ನಿಡಗುಂದಿಯ ಪರಗಣೆಯಲ್ಲಿ ೨೧, ಉಕ್ಕಲಿಯ ಪರಗಣೆಯಲ್ಲಿ ೬, ಚಾಂದ ಕವಠೆಯ ಪರಗಣೆಯಲ್ಲಿ ೧೨, ಹೊನವಾಡದ ಪರಗಣೆಯಲ್ಲಿ ೪ ಖಾಲಸಾ ಆದವು. ಸನ್ ೧೮೪೨ರಲ್ಲಿ ಸಾತಾರೆಯ ಅರಸನು ಬೇರೆ ಹಳ್ಳಿಗಳನ್ನು ತಕ್ಕೊಂಡು ಹೊರ್ತಿಯ ಪರಗಣೆಯಲ್ಲಿ ೨೦, ಉಕ್ಕಲಿಯ ಪರಗಣೆಯಲ್ಲಿ ೧, ಹಲಸಂಗಿಯ ಪರಗಣೆಯಲ್ಲಿ ೨೮, ಬಾಗೇಬಾಡಿಯ ಪರಗಣೆಯಲ್ಲಿ ೨೪ ಹಳ್ಳಿಗಳನ್ನು ಸರಕಾರಕ್ಕೆ ಕೊಟ್ಟನು. ಸನ್ ೧೮೪೮ರಲ್ಲಿ ಸಾತಾರೆಯ ಅರಸು ಸಂತತಿ ಇಲ್ಲದೆ ತೀರಿದ್ದರಿಂದ ಹವೇಲಿಯ ಪರಗಣೆಯಲ್ಲಿ ೩೦, ಗೋಠೆಯ ಪರಗಣೆಯಲ್ಲಿ ೭, ಮುಳವಾಡದ ಪರಗಣೆಯಲ್ಲಿ ೧೧, ಮಮದಾಪುರದಲ್ಲಿ ೨೧, ಹೊನವಾಡದಲ್ಲಿ ೨, ಬಾಡೋಲದಲ್ಲಿ ೧, ಬಳ್ಳೊಳ್ಳಿಯಲ್ಲಿ ೭, ಸಿದನಾಥದಲ್ಲಿ ೬, ಚಿನ್ಮಲಿಗೆಯಲ್ಲಿ ೧, ಕೊಲ್ಹಾರದಲ್ಲಿ ೬, ಸರಕಾರಕ್ಕೆ ಶೇರಿದವು. ಸನ್ ೧೮೫೭ರಲ್ಲಿ ಕಾಗವಾಡದ ಪಟವರ್ಧನನು ಸಂತತಿಯಿಲ್ಲದೆ ತೀರಿದ್ದರಿಂದ ಚಿಮ್ಮಲಿಗೆಯ ಪರಗಣೆಯ ೧೪ ಗ್ರಾಮಗಳು ಸರಕಾರಕ್ಕೆ ಶೇರಿದವು. ಸನ್ ೧೮೫೮ರಲ್ಲಿ ನರಗುಂದದ ರಾಜ್ಯ ತಕ್ಕೊಂಡದ್ದರಿಂದ ಹೊಸಕೇರಿಯ ಪರಗಣೆಯಲ್ಲಿ ೧, ಕೊಣ್ಣೂರ ಪರಗಣೆಯಲ್ಲಿ ೧೦ ಹಳ್ಳಿಗಳು ಸರಕಾರಕ್ಕೆ ಶೇರಿದವು.

ಬೆಳಗಾವಿಯ ಜಿಲ್ಲೆಯಲ್ಲಿ ಸನ್ ೧೮೨೧ರಲ್ಲಿ ಸಾಂಗಲಿಯ ಸಂಸ್ಥಾನಿಕನು ಸರಕಾರದ ನೌಕರಿಯ ಬದಲಾಗಿ ಶಹಾಪುರದ ತಾಲೂಕಿನ ಪೈಕಿ ೮ ಗ್ರಾಮಗಳನ್ನು ಸರಕಾರಕ್ಕೆ ಕೊಟ್ಟನು. ಸನ್ ೧೮೨೪ರಲ್ಲಿ ಕಿತ್ತೂರ ದೇಸಾಯಿಯು ಸಂತತಿ ಇಲ್ಲದೆ ಸತ್ತದ್ದರಿಂದ ಸಂಪಗಾವಿ, ಬೀಡಿ, ಈ ಯೆರಡು ತಾಲೂಕುಗಳು ಸರಕಾರಕ್ಕೆ ಶೇರಿದವು. ಸನ್ ೧೮೨೭ರಲ್ಲಿ ಕೊಲ್ಹಾಪುರದ ಅರಸನು ತಹನಾಮೆಯ ಪ್ರಕಾರ ಚಿಕ್ಕೋಡಿ, ಮುನ್ನೊಳ್ಳಿ, ಈ ಯೆರಡು ಪರಗಣೆಗಳನ್ನು ಕೊಟ್ಟನು. ಚಿಂಚಲಿಯ ಪಟವರ್ಧನನ ರಾಜ್ಯದ ಪೈಕಿ ಸನ್ ೧೮೩೬ರಲ್ಲಿ ಗೋಕಾವಿಯ ಪರಗಣೆ, ಯಾದವಾಡ, ತೇರದಾಳ, ಕೊಕಟನೂರು, ಅಥಣಿ,

ಬಿದರಿ, ಈ ಪರಗಣೆಗಳ ಪೈಕಿ ಕೆಲ ಕೆಲವು ಹಳ್ಳಿಗಳು, ರಾಯಬಾಗ ಪ್ರಾಂತದ ಪೈಕಿ ಯೆರಡು ಗ್ರಾಮಗಳು ಬೆಳಗಾವಿಯ ಜಿಲ್ಲೆಗೆ ಶೇರಿದವು. ಸನ್ ೧೮೩೭ರಲ್ಲಿ ಕುರುಂದವಾಡದ ನೀಲಕಂಠ ರಾಯನು ಸತ್ತದ್ದರಿಂದ ತೇರದಾಳದ ಪರಗಣೆಯ ಪೈಕಿ ೨ ಗ್ರಾಮಗಳು; ಸನ್ ೧೮೩೯ರಲ್ಲಿ ನಿಪಾಣಕರನು ಸತ್ತದ್ದರಿಂದ ಅಥಣಿಯ ಪರಗಣೆ, ಗಡಿ ಕೊಕಟನೂರ ಪೈಕಿ ೬, ಹೊನವಾಡ ಪೈಕಿ ೧೨, ಬೇರೆ ೬, ಹಳ್ಳಿಗಳು; ಸನ್ ೧೮೪೨ರಲ್ಲಿ ಮಿರ್ಜಿಯ ಗೋಪಾಳರಾವ ಪಟವರ್ಧನನ ೬ ಹಳ್ಳಿಗಳು; ಸನ್ ೧೮೪೮ರಲ್ಲಿ ತಾಸಗಾವಿಯ ಪಟವರ್ಧನನು ಸತ್ತದ್ದರಿಂದ ಸೌದಿ, ಯಾದವಾಡ ಪರಗಣೆಗಳು; ಸನ್ ೧೮೫೭ರಲ್ಲಿ ಕಾಗವಾಡದ ಪಟವರ್ಧನನು ಸತ್ತದ್ದರಿಂದ ೧೨ ಹಳ್ಳಿಗಳು; ಈ ಪ್ರಕಾರ ಗ್ರಾಮಗಳು ಸನ್ ೧೮೧೮ರ ಈಚೆಯಲ್ಲಿ ಬೆಳಗಾವೀ ಜಿಲ್ಲೆಗೆ ಶೇರಿದವು.

ಧಾರವಾಡದ ಜಿಲ್ಲೆಯಲ್ಲಿ, ಸನ್ ೧೮೨೧ರಲ್ಲಿ ಸಾಂಗಲಿಯ ಪಟವರ್ಧನನು ಚಾಕರಿಯ ಸಮ್ಮಂಧವಾಗಿ ಹುಬ್ಬಳ್ಳಿ, ತಡಸ, ಬೊಮ್ಮಿಗಟ್ಟಿಯ ಸಮ್ಮತು, ಇವುಗಳನ್ನು ಸರಕಾರಕ್ಕೆ ಕೊಟ್ಟನು. ಸನ್ ೧೮೩೭ರಲ್ಲಿ ಚಿಂಚಲಿಯ ಸಂಸ್ಥಾನದ ಪೈಕಿ ೧ ಹಳ್ಳಿ, ಸನ್ ೧೮೩೯ರಲ್ಲಿ ನಿಪಾಣಿಯ ಪೈಕಿ ಅಣ್ಣೀಗೇರಿ ಪರಗಣೆಯ ೧೩ ಹಳ್ಳಿಗಳು; ಸನ್ ೧೮೪೨ರಲ್ಲಿ ಮಿರ್ಜಿಯ ಗೋಪಾಳರಾಯನ ಪೈಕಿ ಲಕ್ಷ್ಮೇಶ್ವರ ತಾಲೂಕಿನ ಪೈಕಿ ೮ ಹಳ್ಳಿಗಳು; ಸನ್ ೧೮೪೮ರಲ್ಲಿ ತಾಸಗಾವಿಯ ಪಟವರ್ಧನನ ರಾಜ್ಯದ ಪೈಕಿ ೮ ಹಳ್ಳಿಗಳು; ಸನ್ ೧೮೫೮ರಲ್ಲಿ ನರಗುಂದ ಸಂಸ್ಥಾನ ಪೈಕಿ ೨೫ ಹಳ್ಳಿಗಳು ಧಾರವಾಡ ಜಿಲ್ಲೆಗೆ ಶೇರಿದವು.

ಹೆಚ್ಚು ಕಡಿಮೆಗಳು.—ಬಾಜೀ ರಾಯನ ರಾಜ್ಯವು ಇಂಗ್ಲಿಷ ಸರಕಾರದ ಕೈಶೇರಿದ ಬಳಿಕ ದಕ್ಷಿಣ ಮಹಾರಾಷ್ಟ್ರದ ಭಾಗವು ಮೊದಲು ಬಳ್ಳಾರಿಯ ಕಲೇಕ್ಟರನ ಆಧೀನವಾಗಿ ಮದ್ರಾಸ ಇಲಾಖೆಗೆ ಶೇರಿತ್ತು; ಕಾನಡಾ ಜಿಲ್ಲೆಯು ಮಂಗಳೂರಿನ ಕಲೆಕ್ಟರನ ಆಧೀನವಾಗಿತ್ತು. ಮುಂದೆ ಸನ್ ೧೮೩೦ರಲ್ಲಿ ದಕ್ಷಿಣ ಮಹಾರಾಷ್ಟ್ರದ ಸರಕಾರೀ ಶೀಮೆಯೆಲ್ಲ ಕೂಡಿ ಧಾರವಾಡ ಜಿಲ್ಲೆಯನ್ನು ಮಾಡಿ ಮುಂಬಯಿ ಇಲಾಖೆಗೆ ಶೇರಿಸಿದರು. ಅದರ ನಂತರ ಸನ್ ೧೮೩೮ರಲ್ಲಿ ಬೆಳಗಾವೀ ಜಿಲ್ಲೆಯನ್ನು ಬೇರೆ ಮಾಡಿ ಅದರಲ್ಲಿ ಪಾಛಾಪುರ, ಸಂಪಗಾವಿ, ಬೀಡಿ, ಚಿಕ್ಕೋಡಿ, ಪರಸಗಡ, ಬಾಗಲಕೋಟೆ, ಬಾದಾಮಿ, ಹುನಗುಂದ, ಇಂಡಿ, ಮುದ್ದೇಬಿಹಾಳ, ಯೆಂಬ ಹತ್ತು ತಾಲೂಕಗಳನ್ನು ಮಾಡಿದರು. ಈ ೧೦ ತಾಲೂಕುಗಳು ಕೂಡಿ ಜನಸಂಖ್ಯವು ೭೮೧೩೩೮ ಇತ್ತು. ಮುಂದೆ ಸ್ವಲ್ಪ ದಿವಸದೊಳಗೆ ಇಂಡಿ, ಮುದ್ದೇಬಿಹಾಳ, ಈ ೨ ತಾಲೂಕುಗಳು ಸೊಲ್ಲಾಪುರದ ಜಿಲ್ಲೆಗೆ ಶೇರಿದವು; ಮತ್ತೂ ಅವುಗಳಿಗೆ ಬದಲಾಗಿ ಗೋಕಾಪ, ಅಥಣಿ, ಈ ೨ ಹೊಸ ತಾಲೂಕುಗಳು ಬೆಳಗಾವೀ ಜಿಲ್ಲೆಯಲ್ಲಿ ಬಂದವು. ಮುಂದೆ ಸನ್ ೧೮೬೪ರ ವರೆಗೆ ಮೇಲೆ ಹೇಳಿದಂತೆ ಹೊಸ ಗ್ರಾಮಗಳು ಜಾಹಾಗೀರದಾರು ಮುಂತಾದವರ ರಾಜ್ಯದೊಳಗಿಂದ ಬೆಳಗಾವೀ ಜಿಲ್ಲೆಗೆ ಶೇರಿದವು.

ಸನ್ ೧೮೬೪ರಲ್ಲಿ ಸೊಲ್ಲಾಪುರ ಜಿಲ್ಲೆಗೆ ಶೇರಿದ ಭೀಮಾ, ಕೃಷ್ಣಾ, ಇವುಗಳ ನಡುವಿರುವ ಇಂಡಿ, ಹಿಪ್ಪರಿಗೆ, ವಿಜಾಪುರ, ಮನಗೋಳಿ, ಮುದ್ದೇಬಿಹಾಳ, ಈ ೫ ಕನ್ನಡ

ತಾಲೂಕುಗಳೂ, ಬೆಳಗಾವೀ ಜಿಲ್ಲೆಗೆ ಶೇರಿದ ಬಾಗಲಕೋಟೆ, ಬಾದಾವಿ, ಹುನಗುಂದ, ಈ ೩ ಪೂರ್ವದ ತಾಲೂಕುಗಳೂ ಕೂಡಿ ಕಳಾದಗೀ ಜಿಲ್ಲೆಯನ್ನು ಮಾಡಿದರು. ಸನ್ ೧೮೬೪ರಲ್ಲಿ ಹಿಪ್ಪರಿಗೆಯ ತಾಲೂಕಿಗೆ ಸಿಂದಗೀ ತಾಲೂಕೆಂತಲೂ, ಮನಗೋಳಿಯ ತಾಲೂಕಿಗೆ ಬಾಗೇವಾಡಿಯ ತಾಲೂಕೆಂತಲೂ ಹೆಸರು ಬದಲು ಮಾಡಿದರು. ಮುಂದೆ ಸನ್ ೧೮೮೫ರಲ್ಲಿ ಕಲಾದಿಗಿಯನ್ನು ಬಿಟ್ಟು ವಿಜಾಪುರ ಜಿಲ್ಲೆಯನ್ನು ಮಾಡಿದರು.

ಕಾನಡಾ ಜಿಲ್ಲೆಯನ್ನು ಸನ್ ೧೮೬೦ರಲ್ಲಿ ಮದ್ರಾಸ ಇಲಾಖೆಯಿಂದ ಮುಂಬಯಿ ಇಲಾಖೆಗೆ ಶೇರಿಸಿ, ಅದಕ್ಕೆ ಉತ್ತರ ಕಾನಡಾ ಯೆಂಬ ಹೆಸರು ಕೊಟ್ಟರು. ಮುಂದೆ ಕೆಲವು ವರ್ಷಗಳ ನಂತರ "ಉತ್ತರ" ಈ ಶಬ್ದವನ್ನು ತೆಗಿದು ಹಾಕಿ ಬರೇ "ಕಾನಡಾ" ಯೆಂದೆನ್ನ ಹತ್ತಿದರು.

**ಭೂಮಿಯನ್ನು ಅಳಿಯುವ ಹಳೆ ಅಳತೆಗಳು.**—ದೇಶೀ ಅರಸರ ಆಳಿಕೆಯಲ್ಲಿ ಬೇರೆ ಬೇರೆ ಕಡೆಯಲ್ಲಿ ಭೂಮಿಯನ್ನು ಅಳಿಯುವ ಮಾಪುಗಳು ಬೇರೆ ಬೇರೆ ಪ್ರಕಾರದವಿದ್ದವು; ಒಂದೇ ಹೆಸರಿನ ಮಾಪು ಸಹ ಯೆಲ್ಲ ಕಡೆಯಲ್ಲಿ ವೊಂದೇ ಮಾನದ್ದು ಇರುತ್ತಿದ್ದಿಲ್ಲ. ಸನ್ ೧೮೨೧ರಲ್ಲಿ ಧಾರವಾಡ ಜಿಲ್ಲೆಯಲ್ಲಿ, ಅಂದರೆ ಇಡೀ ದಕ್ಷಿಣ ಮಹಾರಾಷ್ಟ್ರದಲ್ಲಿ ನಡಿಯುತ್ತಿದ್ದ ಅಳತೆಗಳು ಹ್ಯಾಗಂದರೆ—ಎರಡು ಯೆತ್ತುಗಳಿಂದು ವೊಂದು ದಿನದೊಳಗೆ ಬಿತ್ತುವಷ್ಟು ಭೂಮಿಗೆ ವೊಂದು ಕೂರಿಗೆ ಯೆಂಬ ಹೆಸರು ಈಗ್ಯೂ ವೊಕ್ಕಲಿಗರಲ್ಲಿ ನಡಿಯುತ್ತದೆ. ಬಿತ್ತುವ ಯೆತ್ತುಗಳ ಕಸುವಿನಂತೆಯೂ, ಭೂಮಿ ಹೆಚ್ಚು ಕಡಿಮೆ ಮಿದು ಇದ್ದಂತೆಯೂ ಕೂರಿಗೆಯ ಮಾನವು ೨ರಿಂದ ೮ ಯೆಕರಿನ ವರೆಗೆ ಆಗುತ್ತದೆ. ಸರಾಸರೀ ಮಾನದಿಂದ ೧ ಕೂರಿಗೆ ಯಂದರೆ ೫ ಯೆಕರು ಯೆಂದು ಹೇಳಬಹುದು. ಕೂರಿಗೆಗಿಂತ ಹೆಚ್ಚಿನ ಅಳತಿ ಪಟ್ಟೆ ಯೆಂಬದು. ಆದರೆ ಯೆರೆ ಭೂಮಿಯ ಪಟ್ಟೆ ಬೇರೆ, ಮಸಬ ಭೂಮಿಯ ಪಟ್ಟೆ ಬೇರೆ, ತರೀ ಭೂಮಿಯ ಪಟ್ಟೆ ಬೇರೆ. ಯೆರೆ ಭೂಮಿಯ ಪಟ್ಟೆಯು ೨೮ರಿಂದ ೪೮ ಕೂರಿಗೆ ಆಗುತ್ತಿತ್ತು; ಬಸಬ ಭೂಮಿಯ ಪಟ್ಟೆಯು ೨ರಿಂದ ೧೨ ಕೂರಿಗೆಯ ವರೆಗೆ, ತರೀ ಭೂಮಿಯ ಪಟ್ಟೆಯು ೨ರಿಂದ ೮ ಕೂರಿಗೆಯ ವರೆಗೆ ಆಗುತ್ತಿತ್ತು.

ಕೆಲವು ಹಳ್ಳಿಗಳಲ್ಲಿ ಕುಳವೆಂಬ ವಿಭಾಗಗಳನ್ನು ಮಾಡಿದ್ದರು. ಕುಳವೆಂದರೆ ವೊಬ್ಬ ರೈತನ ಕೈಯಲ್ಲಿ ಇರತಕ್ಕಷ್ಟು ಭೂಮಿಯು; ಅದು ೬ರಿಂದ ೮ ಕೂರಿಗೆಯ ವರೆಗೆ ಆಗುತ್ತಿತ್ತು. ಕೆಲವು ಕಡೆಯಲ್ಲಿ ವೊಂದು ಕೂರಿಗೆ ಭೂಮಿಗೆ ಸ್ಥಳವೆಂದೆನ್ನುವರು. ಈ ಸ್ಥಳವೆಂಬ ಮಾಪೂ, ಕೊಂಕಣದ ಠಿಕಣವೆಂಬ ಮಾಪೂ ವೊಂದೇ ಯೆಂದು ತೋರುತ್ತದೆ. ಕೆಲವು ಹಳ್ಳಿಗಳಲ್ಲಿ ಘಳಣಿ ಯೆಂಬ ವಿಭಾಗಗಳಿದ್ದವು; ಒಂದು ಘಳಣಿ ಯೆಂದರೆ ಸುಮಾರು ೨ ಕೂರಿಗೆ ಆಗುತ್ತಿತ್ತು. ಬೇರೆ ಕೆಲವು ಹಳ್ಳಿಗಳಲ್ಲಿ ಮಾರು ಯೆಂಬ ವಿಭಾಗಗಳಿದ್ದವು. ಮನುಷ್ಯನ ಕೈಮಾರಿನ ಅಳತೆಯಿಂದ ಈ ಹೆಸರು ಬಂದಿರ ಬಹುದೆಂದು ತೋರುತ್ತದೆ. ೨೦ ಕೈಮಾರೆಂದರೆ ೧ ಬಿಘೆ ೩೬ ಬಿಘೆ ಅಂದರೆ ವೊಂದು ಮಾರು; ಈ ಕೋ

ಪ್ಟಕವು ಈಗ್ಯೂ ನಡಿಯುತ್ತದೆ. ಮಾರಿನಲ್ಲಿ ರಾಯರೇಖೀ ಮಾರೆಂತಲೂ, ವಿಠ್ಠಲಪಂತೀ ಮಾರೆಂತಲೂ ಯೆರಡು ಭೇದಗಳಿವೆ. ರಾಯರೇಖೀ ಮಾರಿಗೆ ಆನೀಗುಂದೀ ಮಾರೆಂತಲೂ ಅನ್ನುವರು; ನಾಲ್ಕೂವರೆ ಮೊಳವೆಂದರೆ ವೊಂದು ಕೈಮಾರೆಂದು ಹಿಡಿದು ರಾಯರೇಖೀ ಮಾರನ್ನು ಮೇಲಿನ ಕೋಷ್ಟಕದಂತೆ ಅಳಿಯುವರು. ಬಾಮನೀ ಬಾದಶಾಹಿಯಲ್ಲಿ ವಿಠ್ಠಲಪಂತನೆಂಬ ಅಧಿಕಾರಿಯು. ಸ್ವಲ್ಪ ಭಿನ್ನ ತರದ್ವೊಂದು ಮಾರು ಗೊತ್ತು ಮಾಡಿದ್ದರಿಂದ ಆ ಮಾರಿಗೆ ಅವನ ಹೆಸರು ಬಂದದೆ. ವಿಠ್ಠಲಪಂತೀ ಮಾರಿನಲ್ಲಿ ಐದೂ ಮುಕ್ಕಾಲು ಮೊಳವೆಂದರೆ ವೊಂದು ಕೈಮಾರಾಗುತ್ತದೆ. ಈ ಮಾಪಿನ ಕೈಮಾರೆಂದರೆ ಸುಮಾರು ಹತ್ತೂವರೆ ಫೂಟಾಗುತ್ತದೆ. ಆದ್ದರಿಂದ ವಿಠ್ಠಲಪಂತೀ ಬಿಘೆ ಯೆಂದರೆ ಇನ್ನೂರು ಫೂಟು ಚಚ್ಚೌಕು ಕ್ಷೇತ್ರವಾಗುತ್ತದೆ. ಮೇಲೆ ಹೇಳಿದ ಮಾನದಿಂದ ರಾಯರೇಖೀ ಬಿಘೆಯೆಂದರೆ ಸುಮಾರು ೯೦ ಮೊಳದ ಕ್ಷೇತ್ರವಾಗುತ್ತದೆ. ಆದರೆ ಅಳಿಯುವವನು ಅಳಿಯುವಾಗ ಹಿಡಿದು ಅಳಿಯುವದರಿಂದ ಮಾಪು ಕಡಿಮೆಯಾಗುತ್ತದೆಂದು ಕಲ್ಪಿಸಿ "ಹಿಂಜಳ ಮುಂಜಿತ"ವೆಂಬ ಹೆಸರಿನಿಂದ ಮತ್ತೆ ೧೨ ಮೊಳ ಕೂಡಿಸುವರು. ಇದರ ಹೊರ್ತು ಭೂಮಿಯ ವೊಡಿಯನ ಸಮಾಧಾನಕ್ಕೋಸ್ಕರ ಕೈಮಾರಿಗೆ ಅರ್ಧ ಮೊಳದಂತೆ ಬಿಘೆಗೆ ೧೦ ಮೊಳ ಬೆಳಿಸುವರು. ಆದ್ದರಿಂದ ವೊಂದು ರಾಯರೇಖೀ ಬಿಘೆ ಯೆಂದರೆ ೧೧೨ ಮೊಳ, ಅಥವಾ ೧೮೧ ಫೂಟು ಆಗುತ್ತದೆ. ಕೆಲವು ಹಳ್ಳಿಗಳಲ್ಲಿ "ಗಳೆ" ಯೆಂಬ ಹೆಸರಿನ ಮಾಪು, ಬೇರೆ ಕೆಲವುಗಳಲ್ಲಿ "ಚಕ್ಲಿ" ಯೆಂಬ ಮಾಪು ನಡಿಯುತ್ತಿತ್ತು. ಗಳೆಯೆಂದರೆ ಸುಮಾರು ೩೨ ಕೂರಿಗೆಯಾಗುತ್ತದೆ; ಚಕ್ಲಿ ಯೆಂದರೆ ಅರ್ಧ ಕೂರಿಗೆಗಿಂತ ಹೆಚ್ಚಾಗುವದಿಲ್ಲ.

ಈ ಪ್ರಕಾರ ಹಳೆ ಅಳತೆಗಳಲ್ಲಿ ಹೆಚ್ಚು ಕಡಿಮೆ ಇರುವ ಕಾರಣ ಇಂಗ್ಲಿಷ ಸರಕಾರದ ಅಮಲು ಆರಂಭವಾದ ಬಳಿಕ ಸರಕಾರೀ ಕಂದಾಯದ ವಸೂಲಿಗೆ ಬಹಳ ತೊಂದರೆಯುಂಟಾಯಿತು. ಗೌಡ ಶಾನಭೋಗರಿಗೆ ಭೂಮಿಯಲ್ಲಿ ಮನಸಿಗೆ ಬಂದ ಹಾಗೆ ಗೊಂದಲ ಮಾಡಲಿಕ್ಕೆ ಆಸ್ಪದವಾಯಿತು. ಅದರಿಂದ ಸರಕಾರೀ ಅಮಲಿನಲ್ಲಿ ದೇಶದೊಳಗೆ ಸ್ವಸ್ಥತೆಯುಂಟಾಗಿ ವೊಕ್ಕಲತನವು ಬೆಳೆಯುತ್ತ ನಡಿದಾಗ್ಯೂ ಸರಕಾರೀ ವಸೂಲಿಗೆ ಕೊರತೆ ಬರ ಹತ್ತಿತು. ಈ ಯಾವತ್ತು ತೊಂದರೆಯನ್ನೂ ತೆಗಿದು ಹಾಕುವದಕ್ಕೋಸ್ಕರ ಸನ್ ೧೮೭೧ರಲ್ಲಿ ರಿವಿನ್ಯೂ ಬೋರ್ಡಿನ ಸಂಘದವರು ಭೂಮಿಯನ್ನು ಅಳಿಯುವ ಆಲೋಚನೇ ತೆಗಿದರು. ಅದರಂತೆ ಧಾರವಾಡ ಜಿಲ್ಲೆಯಲ್ಲಿ ಆ ವರ್ಷ ಭೂಮಿಯ ಅಳಿಯುವ ಕೆಲಸವಾದರೂ ಆರಂಭವಾಯಿತು. ಆದರೆ ಅದು ಬಹಳವಾಗಿ ನೆಟ್ಟಗೆ ಸಾಗಿದಂತೆ ತೋರುವದಿಲ್ಲ. ಪ್ರಾಂತದ ಅಧಿಕಾರಿಗಳು ನಾನಾ ಪ್ರಕಾರದ ಅಡ್ಡಿಗಳನ್ನು ತೋರಿಸಿದ್ದರಿಂದಲೂ, ಹೊಸದಾಗಿ ಸರಕಾರೀ ರಾಜ್ಯಕ್ಕೆ ಶೇರಿದ ಪ್ರಜೆಗಳ ಭೂಮಿಯನ್ನು ಅಳಿದು ಕಟ್ಟು ಮಾಡಿ ಇಟ್ಟರೆ ಅಸಂತುಷ್ಟರಾಗುವರೆಂಬ ಹೆದರಿಕೆಯಿಂದಲೂ ಆ ಕೆಲಸವು ಯೆಲ್ಲ ಕಡೆಯಲ್ಲಿ ಸರಿಯಾಗಿ ಸಾಗಲಿಲ್ಲೆಂದು ತೋರುತ್ತದೆ.

# ಮೊದಲನೇ ಸರ್ವೇ ಪ್ರತಿಬಂದಿ.

ಆದರೂ ಭೂಮಿಯನ್ನು ಅಳೆದ ಹೊರ್ತು ಗತ್ಯಂತರವಿಲ್ಲೆಂದು ಸರಕಾರದವರು ದಿನ ದಿನಕ್ಕೆ ಹೆಚ್ಚು ಮನಗಂಡರು. ಆದ್ದರಿಂದ ಹೊತ್ತು ಸಾಧಿಸಿ ಆ ಕೆಲಸವನ್ನು ಸನ್ ೧೮೪೩ರಿಂದ ಆರಂಭಿಸಿದರು.

ಧಾರವಾಡ ಜಿಲ್ಲೆಯಲ್ಲಿ ಅಳೆಯುವ ಕೆಲಸವು ಸನ್ ೧೮೪೩ರಲ್ಲಿ ಆರಂಭವಾಗಿ ೧೮೫೧ರಲ್ಲಿ ಮುಗೀತು. ನರಗುಂದದ ಸಂಸ್ಥಾನದ ೩೧ ಹಳ್ಳಿಗಳು ಸನ್ ೧೮೫೮ರಲ್ಲಿ ಈ ಜಿಲ್ಲೆಗೆ ಶೇರಲಾಗಿ ಮುಂದಿನ ವರ್ಷ ಆ ಹಳ್ಳಿಗಳ ಭೂಮಿಯನ್ನೂ ಅಳೆದರು. ಯಾವತ್ತು ಭೂಮಿಯನ್ನು ಅಳೆದು ಪ್ರತಿಬಂದಿಯ ದರಗಳನ್ನು ಗೊತ್ತು ಮಾಡಿದ ಬಳಿಕ ಪ್ರೊಟ್ಟು ಸರಕಾರೀ ಕಂದಾಯದಲ್ಲಿ ಶೇಕಡಾ ಮೂವತ್ತರಂತೆ ಸರಕಾರಕ್ಕೆ ನುಕಸಾನು ಬಂತು. ಈ ಪ್ರತಿಬಂದಿಯಂತೆ ಮೂವತ್ತು ವರ್ಷ ಸರಕಾರೀ ವಸೂಲು ನಡಿಯ ಬೇಕೆಂದು ಮೊದಲೇ ಠರಾವು ಆಗಿತ್ತು. ಈ ಕೆಳಗಿನ ಕೋಷ್ಟಕದಲ್ಲಿ ಸನ್ ೧೮೪೩ರಿಂದ ೧೮೬೦ರ ವರಿಗೆ ಅಳತಿ ಪ್ರತಿ ಬಂದಿಗಳಾದ್ದರ ವಿವರವನ್ನು ದೊರಿದಷ್ಟು ಮಟ್ಟಿಗೆ ಕೊಟ್ಟಿದ್ದೇವೆ.

## ಧಾರವಾಡ ಜಿಲ್ಲೆಯ ೧ನೇ ಸರ್ವೇ ಪ್ರತಿಬಂದಿ, ೧೮೪೩—೧೮೬೦.

| ವಿಭಾಗಗಳು. | ಹಳ್ಳಿ | ಪ್ರತಿಬಂದೀ ಆದ ವರ್ಷ. | ಎಲ್ಲಕ್ಕೂ ಹೆಚ್ಚಿನ ದರ ಎಕರೆಗೆ. | | ವಸೂಲು. | | | |
|---|---|---|---|---|---|---|---|---|
| | | | ರೂ. | ಆ. | ಪ್ರತಿಬಂದಿಯ ಪೂರ್ವದ್ದು. | ಪ್ರತಿಬಂದಿಯ ನಂತರದ್ದು. | ಹೆಚ್ಚು. | ಕಡಿಮೆ ಶೇಕಡಾ. |
| ಹುಬ್ಬಳ್ಳಿ ........ | ೪೭ | ೪೩—೪೫ | ೨ | ,, | ೪೯೬೧೦ | ೪೭೯೨೯ | ,, | ೩.೪ |
| ನವಲಗುಂದ ...... | ೮೧ | ೪೪—೪೫ | ೧ | ೫ | ೧೬೩೦೭೨ | ೧೧೦೬೮೯ | ,, | ೩೨.೧ |
| ಡಂಬಳ ........ | ೮೬ | ೪೫—೪೬ | ೧ | ೮ | ೧೨೩೯೪೪ | ೭೦೮೬೦ | ,, | ೪೨.೮ |
| ಬಂಕಾಪುರ ...... | ೧೩೭ | ೪೬—೪೭ | ೧ | ೧೨ | ೧೨೫೭೬೧ | ೯೮೯೦೧ | ,, | ೨೧.೩ |
| ರಾಣೇಬಿನ್ನೂರು ... | ೧೩೦ | ೪೭—೪೮ | ೧ | ೬ | ೧೦೨೨೮೦ | ೫೫೩೯೩ | ,, | ೪೫.೮ |
| ಹಾನಗಲ್ಲು ...... | ೧೬೧ | ೪೭—೪೮ | ೧ | ೧೫ | ೧೨೨೯೮೯ (ಹಾನಗಲ್ಲು, ತಡಸ) | ೯೩೬೭೪ | ,, | ೨೩.೮ |
| ತಡಸ ........ | ೫೪ | ೪೭—೪೮ | ೧ | ೧೫ | | | | |
| ಕೋಡ ........ | ೨೪೫ | ೪೮—೪೯ | ೧ | ೧೨ | ೧೦೮೯೩೦ | ೯೬೦೧೯ | ,, | ೧೧.೮ |
| ಧಾರವಾಡ ...... | ೧೩೩ | ೪೮—೪೯ | ೨ | ೪ | ೧೫೨೩೯೨ | ೯೦೨೬೬ | ,, | ೪೦.೭ |
| ಮಿಶ್ರೀಕೋಟಿ .... | ೯೯ | ೪೮—೪೯ | ೧ | ೫ | ೪೭೭೬೭ | ೨೪೭೪೯ | ,, | ೪೭.೧ |
| ಮುಳಗುಂದ ..... | ೨೯ | ೫೦—೫೧ | ೧ | ೫ | ೪೯೬೧೬ | ೩೭೬೨೨ | ,, | ೨೪.೧ |
| ನರಗುಂದ ...... | ೩೧ | ೫೯—೬೦ | ೧ | ೭ | ೩೫೭೭೦ | *೩೭೮೩೮ | ೫.೮ | ,, |
| | ೧೨೩೩ | | | | ೧೦೮೨೧೩೧ | ೭೬೪೪೪೦ | ,, | ೨೯.೩ |

* ಹಸನು ಭೂಮಿಯ ಪ್ರತಿಬಂದೀ ಕಂದಾಯ.

ಸನ್ ೧೮೪೩-೪೪ರಲ್ಲಿ ಧಾರವಾಡ ಜಿಲ್ಲೆಯಲ್ಲಿ ವೊಟ್ಟು ಹಸನಾದ ಭೂಮಿಯು ೫೮೭೯೩ ಯೆಕರು ಇತ್ತು; ಇದರ ಕಂದಾಯ ೧೧೨೧೬೦ ರೂಪಾಯಿ ಆಗುತ್ತಿತ್ತು. ಸನ್ ೧೮೫೪-೫೫ರಲ್ಲಿ ಹಸನಾದ ಭೂಮಿಯು ಬೆಳಿದು ೧೦೭೬೩೫೦ ಯೆಕರು ಆಯಿತು; ಇದರ ಕಂದಾಯದ ವಸೂಲು ೧೩೭೯೨೩೮ ರೂಪಾಯಿ ಆಗುತ್ತಿತ್ತು. ಇದರಲ್ಲಿ ಸನ್ ೧೮೪೩ರಿಂದಿತ್ತ ಹೊಸತಾಗಿ ಈ ಜಿಲ್ಲೆಯೊಳಗೆ ಶೇರಿದ ಗ್ರಾಮುಗಳ ಭೂಮಿಯನ್ನು ಕಳಿಯಲಾಗಿ, ನಿಜವಾಗಿ ಬೆಳಿದ ಹಸನು ಭೂಮಿ ೪೧೦೩೯೧ ಯೆಕರು; ಇದರ ಕಂದಾಯದ ವಸೂಲು ೧೭೭೬೭೦ ರೂಪಾಯಿ. ಒಕ್ಕಲಿಗನಿಗೆ ಸರಾಸರೀ ಮಾನದಿಂದ ಹಸನು ಮಾಡುವ ವೆಚ್ಚ ಹೋಗಲಾಗಿ ಉಳಿಯುವ ಲಾಭದ ವಿವರವು ಕೆಳಗೆ ಬರಿದಂತೆ.

| ಭೂಮಿ. | ಯೆಕರಿಗೆ ಖರ್ಚು. | ಸರಕಾರಿ ತೆರಿಗೆ. | ಲಾಭ. | ಒಟ್ಟು. |
|---|---|---|---|---|
| ನೀರಿನ ಆಶ್ರಯವುಳ್ಳ ಭೂಮಿ. | ೨೦—೪—೦ | ೬—೧೨—೦ | ೨೭—೦—೦ | ೫೪—೦—೦ |
| ಬತ್ತದ ಭೂಮಿ . . . . . | ೬—೪—೬ | ೩—೧—೬ | ೮—೬—೦ | ೧೭—೧೨—೦ |
| ಹತ್ತಿಯ ಭೂಮಿ. . . . . | ೨—೦—೦ | ೧—೦—೦ | ೪—೦—೦ | ೭—೦—೦ |
| ಕಡಿಮೇ ಭೂಮಿ. . . . . | ೨—೦—೦ | ೦—೧೨—೦ | ೩—೦—೦ | ೫—೧೨—೦ |

ಸನ್ ೧೮೪೬ರಿಂದ ೧೮೫೧ರ ವರೆಗೆ ಯೆತ್ತುಗಳು ೩೪೦೭೮ ಬೆಳಿದವು; ಅಂದರೆ ಶೇಕಡಾ ಸುಮಾರು ೩೦ರಂತೆ ಬೆಳಿದವು. ಕೋಣಗಳು ೧೦೫೬೩, ಅಂದರೆ ಶೇಕಡಾ ೨೫ರಂತೆ ಹೆಚ್ಚಾದವು. ರಂಟೆಗಳು ೩೬೪, ಛಕಡಿಗಳು ೪೧೩೭ ಹೆಚ್ಚಾದವು. ಕೆರೆಗಳು ೧೯. ಇದರಿಂದ ವೊಕ್ಕಲಿಗರ ಸಾಲವು ಕಡಿಮೆಯಾಗಿ, ಅವರು ದಿನ ದಿನಕ್ಕೆ ಸುಖಿಯಾಗುತ್ತ ನಡಿದರಂತೆ ಸ್ಪಷ್ಟವಾಗುತ್ತದೆ.

ಸನ್ ೧೮೫೬ರಲ್ಲಿ ಧಾರವಾಡ ಜಿಲ್ಲೆಯ ವೊಟ್ಟು ಭೂಮಿ ೫೧೭೮ ಚಚ್ಚೌಕು ಮೈಲು ಇತ್ತು. ಒಟ್ಟು ೧೫೪೬ ಗ್ರಾಮುಗಳಲ್ಲಿ ಕೂಡಿ ಜನಸಂಖ್ಯವು ೭೫೪೩೮೫, ಅಂದರೆ ಚಚ್ಚೌಕು ಮೈಲಿಗೆ ೧೪೫·೯ರಂತೆ ಇತ್ತು.

ಬೆಳಗಾವೀ ಜಿಲ್ಲೆಯಲ್ಲಿ ಮೂವತ್ತು ವರ್ಷದ ಠರಾವಿನಿಂದ ಭೂಮಿಯನ್ನು ಅಳಿಯುವ ಕೆಲಸವು ಸನ್ ೧೮೪೯ರಲ್ಲಿ ಆರಂಭವಾಗಿ ೧೮೬೦ರಲ್ಲಿ ಮುಗೀತು. ಸರ್ವೇ ಆಗುವ ಪೂರ್ವದ ಕಂದಾಯದ ವಸೂಲಿಗಿಂತ ನಂತರದ ವಸೂಲು ಶೇಕಡಾ ಹದಿನಾಲ್ಕರಂತೆ ಕಡಿಮೆಯಾಯಿತು.

## ಬೆಳಗಾವೀ ಜಿಲ್ಲೆಯ ೧ನೇ ಸರ್ವೇ ಪ್ರತಿಬಂದಿ, ೧೮೪೯—೧೮೬೦.

| ವಿಭಾಗಗಳು. | ಗ್ರಾಮಗಳು. | ಪ್ರತಿಬಂದಿ ಆದ ವರ್ಷ. | ವಸೂಲು. | | | |
|---|---|---|---|---|---|---|
| | | | ಪ್ರತಿಬಂದಿಯ ಪೂರ್ವದ್ದು. | ಪ್ರತಿಬಂದಿಯ ನಂತರದ್ದು. | ಹೆಚ್ಚು ಶೇಕಡಾ. | ಕಡಿಮೆ ಶೇಕಡಾ. |
| ಪರಸಗಡ ........ | ೧೦೮ | ೪೯ | ೬೯೭೮೬ | ೭೦೮೧೪ | ೧·೫ | ,, |
| ಗೋಕಾವಿ ........ | ೪೭ | ೪೯ | ೩೦೩೩೪ | ೨೩೭೬೪ | ,, | ೨೧·೬ |
| ಯಾದವಾಡ ....... | ೧೦ | ೫೧ | ೭೬೬೯ | ೬೫೯೩ | ,, | ೧೪·೦ |
| ಅಥಣಿ .......... | ೭೪ | ೫೧—೫೩ | ೮೨೭೧೫ | ೬೬೩೫೬ | ,, | ೧೪·೨ |
| ಸಂಪಗಾವಿ ........ | ೧೦೬ | ೫೨ | ೧೪೪೪೭೬ | ೧೨೨೭೭೩ | ,, | ೧೫·೦ |
| ಚಿಕ್ಕೋಡಿ ..... .. | ೧೪೧ | ೫೩ | ೧೩೮೭೮೦ | ೯೯೬೨೧ | ,, | ೨೮.೨ |
| ಪಾಚ್ಛಾಪುರ ....... | ೫೨ | ೫೩—೫೫ | ೪೪೮೧೮ | ೩೫೦೪೪ | ,, | ೧೯·೩ |
| ಬೀಡಿ........... | ೧೬೦ | ೫೪—೫೫ | ೫೯೦೮೪ | ೫೫೮೫೪ | ,, | ೫·೫ |
| ಕಾಗವಾಡ ........ | ೪೯ | ೬೦ | ೬೧೨೬೬ | ೬೬೭೭೩ | ೮·೯ | ,, |
| | ೭೫೦ | | ೬೩೮೯೨೮ | ೫೪೭೬೯೨ | .. | ೧೪·೨ |

ಕಾಗವಾಡದ ಸಂಸ್ಥಾನಿಕನು ಸನ್ ೧೮೫೭ರಲ್ಲಿ ಸಂತತಿ ಇಲ್ಲದೆ ತೀರಿದ್ದರಿಂದ ಅವನ ಜಹಾಗೀರನ ಪೈಕಿ ೪೯ ಹಳ್ಳಿಗಳು ಬೆಳಗಾವೀ ಜಿಲ್ಲೆಗೆ ಶೇರಿದವು. ಈ ಹಳ್ಳಿಗಳ ಭೂಮಿಯನ್ನು ಇಪ್ಪತ್ತು ವರುಷದ ಠರಾವಿನಿಂದ ಸನ್ ೧೮೬೦ರಲ್ಲಿ ಅಳಿದು ಪ್ರತಿಬಂದೀ ಮಾಡಿದರು. ಇವುಗಳಲ್ಲಿ ಯೆಷ್ಟೋ ಹಳ್ಳಿಗಳನ್ನು ಜಹಾಗೀರದಾರನು ಸಾವುಕಾರರಿಗೆ ವೊತ್ತೀ ಹಾಕಿದ್ದನು. ಆ ಸಾವುಕಾರರ ಗುಮಾಸ್ತರು ತಮ್ಮ ಹಳ್ಳಿಗಳಲ್ಲಿ ಮನಸಿಗೆ ಬಂದ ಹಾಗೆ ದುಡ್ಡು ವಸೂಲು ಮಾಡುತ್ತಿದ್ದ ಕಾರಣ ರೈತರು ಬಡ ಸ್ಥಿತಿಗೆ ಬಂದಿದ್ದರು; ತೆರಿಗೆಯ ದರಗಳು ಬಹಳ ಅನಿಯಮಿತವಾಗಿ ಇದ್ದವು. ಈ ಹಳ್ಳಿಗಳು ಸರಕಾರದ ಕೈ ಶೇರಿದ ಬಳಿಕ ಭೂಮಿಯನ್ನು ಅಳಿದು, ವೊಂದು ನಿಯಮ ಹಿಡಿದು ಹೊಸ ದರಗಳನ್ನು ಪ್ರತಿಭಂದಿಯಿಂದ ಗೊತ್ತು ಮಾಡಲಾಗಿ, ಕಂದಾಯದ ಆಕಾರವು ಮೊದಲು ೬೧೨೬೬ ರೂಪಾಯಿ ಇದ್ದದ್ದು ೬೬೭೭೩ ರೂಪಾಯಿ ಆಯಿತು; ಅಂದರೆ ಶೇಕಡಾ ೮·೯ ಆಕಾರ ಹೆಚ್ಚು ಆಯಿತು.

ವಿಜಾಪುರ ಜಿಲ್ಲೆಯನ್ನು, ಅಂದರೆ ಮೊದಲಿನ ಕಲಾದಗೀ ಜಿಲ್ಲೆಯನ್ನು, ಸನ್೧೮೬೪ರಲ್ಲಿ ಹೊಸದಾಗಿ ಮಾಡಿದಾಗ ಅದರಲ್ಲಿ ೧೨೦೪ ಗ್ರಾಮಗಳಿದ್ದವು; ಅವುಗಳಲ್ಲಿ ಸರಕಾರೀ ೧೧೦೩, ದುಮಾಲಿ ೨೦೧.—ಒಟ್ಟು ಕ್ಷೇತ್ರವು ೨೦೫೩೮೮೩ ಯೆಕರು, ಜನಸಂಖ್ಯೆ ೭೧೪೨೫ ಇತ್ತು. ದುಮಾಲೀ ಭೂಮಿ ಹೊರ್ತಾಗಿ ಆಗಿನ ಸರಕಾರೀ ವಸೂಲು

೧೩೯೮೮೧೦ ರೂಪಾಯಿ ಇತ್ತು. ಸನ್ ೧೮೬೪ರಿಂದಿತ್ತ ಈ ಜಿಲ್ಲೆಯ ಭೂಮಿಯಲ್ಲಿ ಹೇಳ ತಕ್ಕಂಥ ಹೆಚ್ಚು ಕಡಿಮೆಗಳು ಬಹುತರ ಆಗಿಲ್ಲ.

ಹಿಂದೆ ಹೇಳಿದಂತೆ ಸನ್ ೧೮೬೪ರ ಪೂರ್ವದಲ್ಲಿ ವಿಜಾಪುರ ಜಿಲ್ಲೆಯ ಕೆಲವು ತಾಲೂಕುಗಳು ಬೆಳಗಾವೀ ಜಿಲ್ಲೆಯಲ್ಲಿ ಕೆಲವು ಸೊಲ್ಲಾಪುರ ಜಿಲ್ಲೆಯಲ್ಲಿ ಇದ್ದವು. ಸರ್ವೇ ಪ್ರತಿಬಂಧಿಯ ಕೆಲಸವು ಸನ್ ೧೮೪೩ರಲ್ಲಿ ಇಂಡೀ ತಾಲೂಕಿನಲ್ಲಿ ಆರಂಭವಾಗಿ, ಇಂಡಿಯ ತರುವಾಯ ಮುದ್ದೇಬಿಹಾಳ, ಹಿಪ್ಪರಿಗಿ, ಮನಗೋಳಿ, ಬಾದಾವಿ, ಬಾಗಲಕೋಟೆ, ಹುನಗುಂದ, ವಿಜಾಪುರ, ಈ ಕ್ರಮದಿಂದ ನಡಿದು ಸನ್ ೧೮೫೮ರಲ್ಲಿ ಮುಗೀತು. ಅಂದರೆ ಕೃಷ್ಣೆಯ ಉತ್ತರದ ತಾಲೂಕುಗಳನ್ನು ಪುಣೆಯ ಸರ್ವೇಖಾತೆಯವರು ಸನ್ ೧೮೪೩ರಲ್ಲಿ ಆರಂಭ ಮಾಡಿ, ಸನ್ ೧೮೪೭ರಲ್ಲಿ ಮುಗಿಸಿದರು; ಕೃಷ್ಣೆಯ ದಕ್ಷಿಣದ ತಾಲೂಕುಗಳನ್ನು ಧಾರವಾಡದ ಸರ್ವೇಖಾತೆಯವರು ಸನ್ ೧೮೫೦ರಲ್ಲಿ ಆರಂಭ ಮಾಡಿ ೧೮೫೮ರಲ್ಲಿ ಮುಗಿಸಿದರು. ಸನ್ ೧೮೪೩ರಲ್ಲಿ ಮೇಲೆ ಹೇಳಿದ ೮ ತಾಲೂಕುಗಳು ಕೂಡಿ ಸರಕಾರೀ ವಸೂಲು ೫೪೪೪೯೦ ರೂಪಾಯಿ ಇತ್ತು. ಆಗ ಇಂಡೀ ತಾಲೂಕಿನಲ್ಲಿ ೧೩೨, ಮುದ್ದೇಬಿಹಾಳ ತಾಲೂಕಿನಲ್ಲಿ ೧೫೨, ಹಿಪ್ಪರಿಗೀ ತಾಲೂಕಿನಲ್ಲಿ ೫೬, ಮನಗೋಳಿಯಲ್ಲಿ ೧೮, ಬಾದಾವಿಯಲ್ಲಿ ೧೩೬, ಬಾಗಲಕೋಟೆಯಲ್ಲಿ ೧೨೪, ಹುನಗುಂದದಲ್ಲಿ ೧೩೬, ವಿಜಾಪುರದಲ್ಲಿ ೭೯ ಸರಕಾರೀ ಹಳ್ಳಿಗಳು ಇದ್ದವು. ಇಷ್ಟಕ್ಕಿಂತ ಹೆಚ್ಚಿನ ವಿವರವು ದೊರಿಯುವದಿಲ್ಲ. ಸನ್ ೧೮೬೪ರಲ್ಲಿ ಸರಕಾರೀ ವಸೂಲು ೧೩೯೮೮ ೩ ರೂಪಾಯಿ ಇತ್ತೆಂದು ಮೇಲೆ ಹೇಳಿದ್ದೇವೆ. ಸನ್ ೧೮೪೩ರಲ್ಲಿಯ ವಸೂಲು ನೋಡಲಾಗಿ, ಸನ್ ೧೮೬೪ರಲ್ಲಿ ಸರಕಾರೀ ವಸೂಲು ಯೆರಡುವರೆ ಪಾಲಿಗಿಂತ ಹೆಚ್ಚು ಬೆಳಿದಿತ್ತೆಂದು ಸಿದ್ಧವಾಗುತ್ತದೆ. ಈ ಬೆಳಿಗೆಯು ಈ ಭಾಗದ ಆರಂಭದಲ್ಲಿ ಹೇಳಿದಂತೆ ಕೆಲವು ಹೊಸ ಗ್ರಾಮಗಳು ಈ ಜಿಲ್ಲೆಗೆ ಶೇರಿದ್ದರಿಂದಲೂ ಪ್ರತಿಬಂಧಿಯ ಕಾರಣದಿಂದಲೂ ಆಯಿತೆಂದು ತೋರುತ್ತದೆ.

ಹಿಂದೆ ಹೇಳಿದಂತೆ ಕಾಗವಾಡದ ಪಟವರ್ಧನನ ಸಂಸ್ಥಾನದ ಪೈಕಿ ೮೯ ಹಳ್ಳಿಗಳು ಬೆಳಗಾವೀ ಜಿಲ್ಲೆಗೆ ಶೇರಿ, ಚಿಮ್ಮಲಿಗೆಯ ಪರಗಣೆಯ ೧೪ ಹಳ್ಳಿಗಳು ವಿಜಾಪುರ ಜಿಲ್ಲೆಗೆ ಶೇರಿದವು. ಇವುಗಳ ಭೂಮಿಯನ್ನು ಸನ್ ೧೮೬೦ರಲ್ಲಿ ಅಳಿದರು. ಈ ಹಳ್ಳಿಗಳ ಮೊದಲಿನ ವಸೂಲು ೪೮೦೨ ರೂಪಾಯಿ ಇತ್ತು. ಪ್ರತಿಬಂಧಿ ಆದ ಬಳಿಕ ಇವುಗಳ ವಸೂಲು ಬೆಳಿದು ೬೧೫೨ ರೂಪಾಯಿ ಆಯಿತು.

ಕಾನಡಾ ಜಿಲ್ಲೆಯು ಸನ್ ೧೮೬೨ರಲ್ಲಿ ಮುಂಬಯಿ ಇಲಾಖೆಗೆ ಶೇರುವ ವರೆಗೆ ಅಲ್ಲಿಯ ಭೂಮಿಯನ್ನು ಅಳಿದಿದ್ದಿಲ್ಲ. ಸನ್ ೧೮೬೪ರಲ್ಲಿ ಅಳಿಯುವ ಕೆಲಸಕ್ಕೆ ಆರಂಭವಾಯಿತು. ಆದರೆ ಈ ಜಿಲ್ಲೆಯಲ್ಲಿ ಮಳಿ ಬಹಳ, ಹವೆಯು ರೋಗಕಾರಕ, ಅಡವಿ ಬಹಳ; ಆದ್ದರಿಂದ ಅಳಿಯುವ ಕೆಲಸವು ವರ್ಷದಲ್ಲಿ ೩, ೪ ತಿಂಗಳು ಮಾತ್ರ ಸಾಗುವದು. ಸನ್ ೧೮೮೨ರ ಆಖೈರ ವರೆಗೆ ಸರ್ವೇ ಪ್ರತಿಬಂಧಿ ಸಹಿತ ಮುಗಿದಂಥ ಗ್ರಾಮಗಳ ವಿವರ ಹ್ಯಾಗಂದರೆ—ಯಲ್ಲಾಪುರ ತಾಲೂಕು ಪೂರಾ, ಹಳ್ಳಿಗಳು ೧೭೩; ಕಾರವಾಡ ತಾಲೂಕು ಪೂರಾ, ಹಳ್ಳಿಗಳು ೬೧; ಕುಮಟಾ ತಾಲೂಕು ಪೂರಾ, ಹಳ್ಳಿಗಳು ೨೧೮; ಅಂಕೋಲಾ ತಾಲೂಕು ಪೂರಾ; ಸುಪೆ ತಾಲೂಕಿನ ೨೭೧ ಹಳ್ಳಿಗಳ ಪೈಕಿ

೨೪೩; ಶಿರಸೀ ತಾಲೂಕಿನ ೯೫ ಹಳ್ಳಿಗಳ ಪೈಕಿ ೨೦೧; ಹೊನ್ನಾವರ ತಾಲೂಕಿನ ೧೪೨ ಹಳ್ಳಿಗಳ ಪೈಕಿ ೩೭, ಇಡೀ ಸಿದ್ದಾಪುರ ತಾಲೂಕು, ಮತ್ತೂ ಸುಪೆ, ಸಿರಸಿ ಹೊನ್ನಾವರ ತಾಲೂಕುಗಳ ಉಳಿದ ಹಳ್ಳಿಗಳು, ಇವುಗಳ ಅಳಿಯುವ ಕೆಲಸವು ಸನ್ ೧೮೮೨ರ ಮುಂದೆ ಸಾಗಿರ ಬಹುದು. ಆದರೆ ವಿವರವು ತಿಳಿದಿಲ್ಲ. ಪ್ರತಿಬಂದೀ ಆದ ವಿಭಾಗಗಳಲ್ಲಿ ಸರಕಾರೀ ಕಂದಾಯ ಬೆಳಿದದ್ದರ ವಿವರ ಹ್ಯಾಗಂದರೆ—ಕಾರವಾಡದಲ್ಲಿ ಶೇಕಡಾ ೧೧೫·೫, ಕುಮಟಾ, ಅಂಕೋಲಾ ತಾಲೂಕುಗಳಲ್ಲಿ ಶೇಕಡಾ ೩೬·೩, ಹೊನ್ನಾವರದ ೩೭ ಹಳ್ಳಿಗಳಲ್ಲಿ ಶೇಕಡಾ ೧೨·೬೨, ಯಲ್ಲಾಪುರ ತಾಲೂಕಿನಲ್ಲಿ ಶೇಕಡಾ ೬೩, ಶಿರಸಿಯ ೨೦೧ ಹಳ್ಳಿಗಳಲ್ಲಿ ಶೇಕಡಾ ೪೦·೮.

ಕಾರವಾಡ ತಾಲೂಕಿನ ಭೂಮಿಯ ಮಿರಾಸಿದಾರರು ಸರಕಾರಕ್ಕೆ ಭೂಮಿಯ ವೊಡೆಯತನವಿಲ್ಲೆಂಬ ಬಗ್ಗೆ ಸನ್ ೧೮೭೦ರಿಂದ ತಕ್ರಾರು ನಡಿಸಿ ಹಾಯಕೋರ್ಟಿನ ವರೆಗೆ ಹೋಗಿ ವ್ಯಾಜ್ಯ ಬೆಳಿಸಿದರು. ಆದರೆ ಅವರ ತಕ್ರಾರು ನಿರಾಧಾರವಾದದ್ದೆಂದು ಹಾಯಕೋರ್ಟಿನಲ್ಲಿ ನಿರ್ಣಯವಾಯಿತು.

## ರಿವಿಜನ್ ಸರ್ವೇ ಪ್ರತಿಬಂದಿ

ಧಾರವಾಡ ಜಿಲ್ಲೆಯಲ್ಲಿ ಮೂವತ್ತು ವರ್ಷದ ಠರಾವಿನಿಂದ ಸನ್ ೧೮೪೩ರಿಂದ ಆರಂಭ ಮಾಡಿದ ವೊದಲಿನ ಸರ್ವೇ ಪ್ರತಿಬಂದಿಯ ಮುದ್ದತು ಸನ್ ೧೮೭೪ರಲ್ಲಿ ಮುಗಿಯಲಿಕ್ಕೆ ಆರಂಭವಾದ್ದರಿಂದ ಅದೇ ವರ್ಷ ರಿವಿಜನ್ ಸರ್ವೇಕ್ಕೆ ಆರಂಭವಾಗಿ ಸನ್ ೧೮೮೧ರಲ್ಲಿ ಮುಗೀತು. ಈ ಯೆರಡನೇ ವೊಜಣಿಯಾದ ಬಳಿಕ ಸರಕಾರೀ ಕಂದಾಯವು ಪರಮಾವಧಿ ಹುಬ್ಬಳ್ಳಿಯ ವಿಭಾಗದಲ್ಲಿ ಶೇಕಡಾ ೬೮ರಿಂದ ಯೆಲ್ಲಕ್ಕೂ ಕಡಿಮೆ ಮಿಶ್ರೀ ಕೋಟೆಯ ವಿಭಾಗದಲ್ಲಿ ಶೇಕಡಾ ೩೪ರ ವರೆಗೆ ಬೆಳೀತು. ಸರಾಸರೀ ಮಾನದಿಂದ ವೊಟ್ಟು ಜಿಲ್ಲೆಯಲ್ಲಿ ಶೇಕಡಾ ೪೭ರಂತೆ ಆಕಾರ ಹೆಚ್ಚಾಯಿತು.

### ಧಾರವಾಡ ಜಿಲ್ಲೆಯ ರಿವಿಜನ್ ಸರ್ವೇ ಪ್ರತಿಬಂದಿ, ೧೮೭೪—೮೧.

| ವಿಭಾಗಗಳು. | ಗ್ರಾಮಗಳು | ವರ್ಷ | ಕಂದಾಯ. | | |
|---|---|---|---|---|---|
| | | | ವೊದಲಿನ ಆಕಾರ. | ರಿವಿಜನ್ ಆದ ನಂತರದ ಆಕಾರ. | ಹೆಚ್ಚು ಶೇಕಡಾ. |
| ಹುಬ್ಬಳ್ಳಿ ............ | ೪೭ | ೧೮೭೪-೭೫ | ೪೮೧೭೩ | ೮೧೧೭೮ | ೬೮·೫೧ |
| ನವಲಗುಂದ ......... | ೮೧ | ೧೮೭೪-೭೫ | ೨೦೦೮೦೧ | ೩೨೦೦೪೭ | ೬೯·೩೮ |
| ಡಂಬಳ ........... | ೯೩ | ೧೮೭೪-೭೫ | ೧೬೭೫೬೬ | ೨೪೮೪೪೬ | ೪೮·೨೦ |
| ಬಂಕಾಪುರ ........... | ೧೩೭ | ೧೮೭೬-೭೭ | ೧೦೭೯೫೧ | ೧೬೧೪೦೨ | ೪೯·೫೦ |
| ಹಾನಗಲ್ಲು, ತಡಸ...... | ೨೧೫ | ೧೮೭೮-೭೯ | ೧೨೭೭೦೪ | ೧೮೬೫೦೫ | ೪೬·೧೦ |
| ರಾಣೀಬನ್ನೂರು ....... | ೧೩೦ | ೧೮೭೮-೭೯ | ೧೧೫೦೩೫ | ೧೬೧೧೭೭ | ೪೦·೧೦ |
| ಕೋಡ............. | ೨೪೭ | ೧೮೭೮-೭೯ | ೧೫೧೦೩೩ | ೨೦೯೮೬೪ | ೩೯·೦೦ |
| ಧಾರವಾಡ .......... | ೧೩೪ | ೧೮೭೯-೮೦ | ೧೩೮೩೪೩ | ೧೯೩೪೦೦ | ೩೯·೮೦ |
| ಮಿಶ್ರೀಕೋಟಿ ........ | ೧೦೬ | ೧೮೭೯-೮೦ | ೬೮೨೧೬ | ೯೧೬೬೭ | ೩೪·೩೦ |
| ಮುಳುಗುಂದ ........ | ೨೯ | ೧೮೮೦-೮೧ | ೬೧೮೮೮ | ೯೬೧೯೨ | ೫೫·೪೦ |
| | ೧೨೧೯ | .. | ೧೧೮೬೭೧೦ | ೧೭೪೯೮೭೮ | ೪೭·೪೬ |

## ಸನ್ ೧೮೬೧-೬೨ರಿಂದ ಪ್ರತಿ ವರ್ಷ ಧಾರವಾಡ ಜಿಲ್ಲೆಯಲ್ಲಿ ಬಿದ್ದ ಮಳೆ, ಜೋಳದ ದರ, ಇವುಗಳ ಕೋಷ್ಟಕ.

| ವರ್ಷ. | ಮಳೆ ಇಂಚು. | ಜೋಳದ ದರ ಪೌಂಡು. | ವರ್ಷ. | ಮಳೆ ಇಂಚು. | ಜೋಳದ ದರ ಪೌಂಡು. |
|---|---|---|---|---|---|
| ೧೮೬೧-೬೨ | ೩೨ | ೭೯ | ೧೮೭೨-೭೩ | ೨೭ | ೩೯ |
| ೧೮೬೨-೬೩ | ೨೪ | ೫೬ | ೧೮೭೩-೭೪ | ೨೭ | ೪೧ |
| ೧೮೬೩-೬೪ | ೨೦ | ೪೧ | ೧೮೭೪-೭೫ | ೪೮ | ೪೭ |
| ೧೮೬೪-೬೫ | ೨೯ | ೧೯ | ೧೮೭೫-೭೬ | ೩೧ | ೫೨ |
| ೧೮೬೫-೬೬ | ೧೮ | ೨೬ | ೧೮೭೬-೭೭ | ೧೬ | ೫೨ |
| ೧೮೬೬-೬೭ | ೩೨ | ೨೦ | ೧೮೭೭-೭೮ | ೩೫ | ೧೯ |
| ೧೮೬೭-೬೮ | ೨೯ | ೪೧ | ೧೮೭೮-೭೯ | ೪೦ | ೩೫ |
| ೧೮೬೮-೬೯ | ೩೧ | ೭೯ | ೧೮೭೯-೮೦ | ೩೮ | ೪೪ |
| ೧೮೬೯-೭೦ | ೨೭ | ೯೦ | ೧೮೮೦-೮೧ | ೩೫ | ೪೬ |
| ೧೮೭೦-೭೧ | ೩೧ | ೪೧ | ೧೮೮೧-೮೨ | ೩೨ | ೬೦ |
| ೧೮೭೧-೭೨ | ೩೦ | ೬೦ | ೧೮೮೨-೮೩ | ೫೦ | ೫೨ |

ಬೆಳಗಾವೀ ಜಿಲ್ಲೆಯಲ್ಲಿ ಮೂವತ್ತು ವರ್ಷದ ಠರಾವಿನಿಂದ ಮಾಡಿದ ಮೊದಲಿನ ಸರ್ವೆಯ ಮುದ್ದತು ಸನ್ ೧೮೮೦ರಲ್ಲಿ ಮುಗಿಯಲಿಕ್ಕೆ ಆರಂಭವಾದ್ದರಿಂದ ಅವೇ ವರ್ಷ ರಿವಿಜನ್ ಸರ್ವೆಕ್ಕೆ ಆರಂಭವಾಯಿತು. ಆ ವರ್ಷದಿಂದ ಸನ್೧೮೮೩ರಲ್ಲಿ ಈ ಪುಸ್ತಕದ ರಚನೆಯಾಗುವ ವರೆಗೆ ಪರಸಗಡ, ಗೋಕಾವಿ, ಈ ಯೆರಡು ತಾಲೂಕುಗಳಲ್ಲಿ ಮಾತ್ರ ರಿವಿಜನ್ ಸರ್ವೇ ಪ್ರತಿಬಂಧಿಯ ಕೆಲಸವು ಮುಗಿದಿತ್ತು. ಈ ಯೆರಡು ತಾಲೂಕುಗಳ ವಿವರ ಹ್ಯಾಗಂದರೆ.—

| ವಿಭಾಗ. | ಗ್ರಾಮಗಳು. | ವರ್ಷ. | ಮೊದಲಿನ ಆಕಾರ. | ರಿವಿಜನ್ ಆದ ನಂತರದ ಆಕಾರ. | ಹೆಚ್ಚು ಶೇಕಡಾ. |
|---|---|---|---|---|---|
| ಪರಸಗಡ .......... | ೧೦೯ | ೧೮೮೦-೮೧ | ೧೨೦೬೬೯ | ೧೬೯೮೬೭ | ೪೦·೮ |
| ಗೋಕಾವಿ .......... | ೭೦ | ೧೮೮೩-೮೪ | ೬೮೧೦೦ | ೮೪೩೩೨ | ೨೩·೮ |
| | ೧೭೯ | .. | ೧೮೮೭೬೯ | ೨೫೪೧೯೯ | ೩೨·೩ |

ಸನ್ ೧೮೬೪-೬೫ನೇ ವರ್ಷದಿಂದ ೧೮೮೨-೮೩ನೇ ವರ್ಷದ ವರೆಗೆ ಬೆಳಗಾವೀ ಜಿಲ್ಲೆಯಲ್ಲಿ ಪ್ರತಿ ವರ್ಷ ಬಿದ್ದ ಮಳೆಯನ್ನೂ ಪ್ರತಿ ವರ್ಷದ ಜೋಳದ ದರಗಳನ್ನೂ ಕೆಳಗಿನ ಪಟ್ಟಿಯಲ್ಲಿ ಕೊಟ್ಟದ್ದೇವೆ.

| ವರ್ಷ. | ಮಳೆ ಇಂಚು. | ಜೋಳ ರೂ. ಗೆ ಪೌಂಡು. | ವರ್ಷ. | ಮಳೆ ಇಂಚು. | ಜೋಳ ರೂ. ಗೆ ಪೌಂಡು |
|---|---|---|---|---|---|
| ೧೮೬೪-೬೫ | ೨೩ | ೨೧ | ೧೮೭೪-೭೫ | ೪೧ | ೪೫ |
| ೧೮೬೫-೬೬ | ೨೦ | ೧೮ | ೧೮೭೫-೭೬ | ೩೫ | ೩೬ |
| ೧೮೬೬-೬೭ | ೨೭ | ೪೦ | ೧೮೭೬-೭೭ | ೨೧ | ೨೦ |
| ೧೮೬೭-೬೮ | ೨೬ | ೪೪ | ೧೮೭೭-೭೮ | ೩೯ | ೨೪ |
| ೧೮೬೮-೬೯ | ೨೯ | ೪೪ | ೧೮೭೮-೭೯ | ೪೧ | ೨೫ |
| ೧೮೬೯-೭೦ | ೨೮ | ೩೩ | ೧೮೭೯-೮೦ | ೩೭ | ೩೮ |
| ೧೮೭೦-೭೧ | ೩೩ | ೪೩ | ೧೮೮೦-೮೧ | ೨೮ | ೫೬ |
| ೧೮೭೧-೭೨ | ೨೩ | ೨೬ | ೧೮೮೧-೮೨ | ೩೨ | ೫೨ |
| ೧೮೭೨-೭೩ | ೨೫ | ೩೨ | ೧೮೮೨-೮೩ | ೩೭ | ೫೦ |
| ೧೮೭೩-೭೪ | ೨೨ | ೪೪ | | | |

ವಿಜಾಪುರ ಜಿಲ್ಲೆಯಲ್ಲಿ ಮೊದಲಿನ ಸರ್ವೇ ಪ್ರತಿಬಂದಿಯ ಮೂವತ್ತು ವರ್ಷದ ಮುದ್ದತು ಸನ್ ೧೮೭೪ರಲ್ಲಿ ಮುಗಿದದ್ದರಿಂದ ಅದೇ ವರ್ಷ ರಿವಿಜನ್ ಸರ್ವೇಕ್ಕೆ ಆರಂಭ ಮಾಡಿ, ಸನ್ ೧೮೭೭ರ ವರೆಗೆ ಕೆಳಗಿನ ನಾಲ್ಕು ವಿಭಾಗಗಳ ಅಳತಿ ಪ್ರತಿಬಂದಿಗಳನ್ನು ಮುಗಿಸಿದರು. ಆ ವಿಭಾಗಗಳು— ೧ ಇಂಡಿ, ಸಿಂದಗಿ, ವಿಜಾಪುರ, ಈ ಮೂರು ತಾಲೂಕುಗಳ ಕೆಲ ಕೆಲವು ಹಳ್ಳಿಗಳು ಕೂಡಿ ವೊಂದು; ೨ ಇಂಡಿ, ಸಿಂದಗಿ, ವಿಜಾಪುರ, ಬಾಗೇವಾಡಿ, ಈ ನಾಲ್ಕು ತಾಲೂಕುಗಳ ಕೆಲ ಕೆಲವು ಹಳ್ಳಿಗಳು ಕೂಡಿ ವೊಂದು; ೩ ಬಾಗೇವಾಡಿ, ಮುದ್ದೇಬಿಹಾಳ ತಾಲೂಕುಗಳ ಹಳ್ಳಿಗಳು ಕೂಡಿ ವೊಂದು; ೪ ಮುದ್ದೇಬಿಹಾಳದ ಕೆಲವು ಹಳ್ಳಿಗಳಷ್ಟೇ ವೊಂದು; ಈ ನಾಲ್ಕು ವಿಭಾಗಗಳ ವಿವರವನ್ನು ಕೆಳಗಿನ ಕೋಷ್ಟಕದಲ್ಲಿ ಕೊಟ್ಟದ್ದೇವೆ.

| ವಿಭಾಗ. | ಹಳ್ಳಿಗಳು. | ವರ್ಷ. | ಕಂದಾಯ. | | |
|---|---|---|---|---|---|
| | | | ಮೊದಲಿನ ಆಕಾರ ರೂ. | ರಿವಿಜನ್ ಆದ ನಂತರದ ಆಕಾರ ರೂ. | ಹೆಚ್ಚು ಶೇಕಡಾ. |
| ೧ನೇ ವಿಭಾಗ . . . | ೧೦೨ | ೧೮೭೪—೭೫ | ೧೦೯೬೫೬ | ೧೬೩೨೦೭ | ೪೮·೮ |
| ೨ನೇ ವಿಭಾಗ . . . | ೧೮೨ | ೧೮೭೫—೭೬ | ೨೩೬೯೨೫ | ೨೯೫೩೯೦ | ೨೪·೬ |
| ೩ನೇ ವಿಭಾಗ . . . | ೧೪೯ | ೧೮೭೬—೭೭ | ೧೬೨೧೮೧ | ೨೦೦೯೩೯ | ೨೩·೯ |
| ೪ನೇ ವಿಭಾಗ . . . | ೨೯ | ೧೮೭೭ | ೩೭೦೭೯ | ೪೪೯೨೪ | ೨೧·೧ |
| | ೪೭೨ | .... | ೫೪೫೮೪೧ | ೭೦೪೪೬೦ | ೨೯·೦ |

ಸನ್ ೧೮೬೪-೬೫ನೇ ವರ್ಷದಿಂದ ೧೮೮೨-೮೩ನೇ ವರ್ಷದ ವರೆಗೆ ವಿಜಾಪುರ ಜಿಲ್ಲೆಯಲ್ಲಿ ಪ್ರತಿ ವರ್ಷ ಬಿದ್ದ ಮಳೆಯನ್ನೂ ಪ್ರತಿ ವರ್ಷದ ಜೋಳದ ದರಗಳನ್ನೂ ಕೆಳಗಿನ ಪಟ್ಟಿಯಲ್ಲಿ ವಿವರಿಸಿದ್ದೇವೆ.

| ವರ್ಷ. | ಮಳೆ ಇಂಚು | ಜೋಳ ರೂ.ಗೆ ಪೌಂಡು. | ವರ್ಷ. | ಮಳೆ ಇಂಚು. | ಜೋಳ ರೂ.ಗೆ ಪೌಂಡು. |
|---|---|---|---|---|---|
| ೧೮೬೪-೬೫ | .. | ೨೪ | ೧೮೭೪-೭೫ | ೧೪·೩೦ | ೬೨ |
| ೧೮೬೫-೬೬ | ೧೩·೦೬ | ೩೧ | ೧೮೭೫-೭೬ | ೨೨·೭೬ | ೫೭ |
| ೧೮೬೬-೬೭ | ೧೧ ·೮೧ | ೨೨ | ೧೮೭೬-೭೭ | ೧೩·೪೦ | ೨೯ |
| ೧೮೬೭-೬೮ | ೭·೫೪ | ೪೫ | ೧೮೭೭-೭೮ | ೩೧·೧೩ | ೧೨* |
| ೧೮೬೮-೬೯ | ೧೫·೯೮ | ೬೩ | ೧೮೭೮-೭೯ | ೩೨·೫೪ | ೨೦ |
| ೧೮೬೯-೭೦ | ೨೭·೮೭ | ೬೬ | ೧೮೭೯-೮೦ | ೨೩·೧೮ | ೨೫ |
| ೧೮೭೦-೭೧ | ೨೫·೯೨ | ೬೦ | ೧೮೮೦-೮೧ | ೨೮·೮೪ | ೫೧ |
| ೧೮೭೧-೭೨ | ೧೩·೯೨ | ೬೧ | ೧೮೮೧-೮೨ | ೨೦·೦೯ | ೬೩ |
| ೧೮೭೨-೭೩ | ೨೬·೪೪ | ೩೯ | ೧೮೮೨-೮೩ | ೨೦·೩೬ | ೮೨ |
| ೧೮೭೩-೭೪ | ೧೫·೬೯ | ೬೮ | | | |

* ಸನ್ ೧೮೭೭ರ ಬರಗಾಲದಲ್ಲಿ ಜೋಳದ ದರವು ಜೂಲಾಯಿಯಲ್ಲಿ ೯ ಪೌಂಡು, ಡಿಜಂಬರಿನಲ್ಲಿ ೨೦ ಪೌಂಡು ಇತ್ತು.

## ಕಂದಾಯದ ಅಧಿಕಾರಿಗಳು.

ಧಾರವಾಡ, ಬೆಳಗಾವಿ, ವಿಜಾಪುರ, ಕಾನಡಾ, ಈ ನಾಲ್ಕು ಜಿಲ್ಲೆಗಳಿಗೆ ನಾಲ್ವರು ಕಲೆಕ್ಟರರಿರುತ್ತಾರೆ. ಇವರ ಸಂಬಳವು ವರ್ಷಕ್ಕೆ ೧೧೬೦೦ರಿಂದ ೨೭೬೦೦ರ ವರೆಗೆ ಇರುತ್ತದೆ. ಕಲೆಕ್ಟರನು ಜಿಲ್ಲೆಯ ವಸೂಲು, ಶಿಲಕು, ಇವುಗಳ ಮುಖ್ಯಾಧಿಕಾರಿ ಇದ್ದದ್ದಲ್ಲದೆ, ಜಿಲ್ಲೆಯ ಮುಖ್ಯ ಮಾಜಿಸ್ತ್ರೇಟನಿರುತ್ತಾನೆ; ಲೋಕಲ್ ಬೋರ್ಡಿನ ಅಧ್ಯಕ್ಷನಿರುತ್ತಾನೆ; ಕೆಲವು ಕಡೆಯಲ್ಲಿ ಡಿಸ್ಟ್ರಿಕ್ಟ ಮ್ಯುನಿಸಿಪಾಲಿಟಿಯ ಅಧ್ಯಕ್ಷನೂ ಕಲೆಕ್ಟರನೇ ಇರುತ್ತಾನೆ. ಇದಲ್ಲದೆ ಅಗ್ರಿಕಲ್ಚರಲ್ (ವೊಕ್ಕಲತನದ) ಖಾತೆಯೂ ಕಲೆಕ್ಟರನಿಗೇ ಆಧೀನವಾಗಿರುತ್ತದೆ. ಪೋಲೀಸ ಖಾತೆಯು ಬೇರೆ ಇದ್ದಾಗ್ಯೂ ಪೋಲೀಸ ಅಧಿಕಾರಿಗಳ ಮೇಲೆ ಕಲೆಕ್ಟರನ ಹುಕುಮು ಪೂರಾ ನಡಿಯುತ್ತದೆ. ಆದ್ದರಿಂದ ಜಿಲ್ಲೆಗೆ ಕಲೆಕ್ಟರನು ಅರಸನಂತೆ ಇರುತ್ತಾನೆಂದು ಹೇಳ ಬಹುದು. ಕಲೆಕ್ಟರನ ಕೈಕೆಳಗೆ ಇಬ್ಬರಾಗಲೀ ಮೂವರಾಗಲೀ ಸನದೀ ಯುರೋಪಿಯನ್ ಅಸಿಷ್ಟಾಂಟ ಕಲೆಕ್ಟರರೂ, ಡಿಸ್ಟ್ರಿಕ್ಟ ಡೆಪ್ಯುಟೀ, ಹುಜೂರ ಡೆಪ್ಯುಟಿ, ಯೆಂಬವರಿಬ್ಬರು ದೇಶೀ ಅಸಿಷ್ಟಾಂಟ ಕಲೆಕ್ಟರರೂ ಇರುತ್ತಾರೆ. ಸನದೀ ಅಸಿಷ್ಟಾಂಟರ ಸಂಬಳ ವರ್ಷಕ್ಕೆ ೬೦೦೦ದಿಂದ ೧೦೮೦೦ರ ವರೆಗೆ ಇರುತ್ತದೆ; ಡೆಪ್ಯುಟೀ ಕಲೆಕ್ಟರರ ಸಂಬಳ ವರ್ಷಕ್ಕೆ ೩೬೦೦ರಿಂದ ೬೦೦೦ದ ವರೆಗೆ ಇರುತ್ತದೆ. ಸನದೀ ಅಸಿಷ್ಟಾಂಟರೂ, ಡಿಸ್ಟ್ರಿಕ್ಟ ಡೆಪ್ಯುಟಿಯೂ ತಮ್ಮ ತಮ್ಮ ಕೈಕೆಳಗಿನ ತಾಲೂಕುಗಳ ಮುಲಕೀ ಖಾತೆಯ ಮೇಲ್ವಿಚಾರಣೆಯನ್ನು ಮಾಡುವದಲ್ಲದೆ, ೧ನೇ ೨ನೇ ವರ್ಗದ ಮಾಜಿಸ್ತ್ರೇಟರಾಗಿ ಫೌಜದಾರೀ ಗುನ್ಹೆಗಳ ಚೌಕಶಿಯನ್ನು ಮಾಡುತ್ತಾರೆ. ಹುಜೂರ ಡೆಪ್ಯುಟೀ ಕಲೆಕ್ಟರರು ಜಿಲ್ಲೆಯ ನಗದ ಜಮೆ, ಖರ್ಚು, ಶಿಲಕು, ಲೆಕ್ಕ, ಇವುಗಳಿಗೆ ಜಬಾಬದಾರರಾಗಿರುವದಲ್ಲದೆ, ೧ನೇ ವರ್ಗದ ಮಾಜಿಸ್ತ್ರೇಟರಾಗಿ ಫೌಜದಾರೀ ಗುನ್ಹೆಗಳ ಚೌಕಶಿಯನ್ನೂ ಮಾಡುತ್ತಾರೆ.

ಕಾರಭಾರದ ಅನುಕೂಲತೆಗಾಗಿ ಪ್ರತಿ ವೊಂದು ಜಿಲ್ಲೆಯಲ್ಲಿ ತಾಲೂಕುಗಳೆಂಬ ವಿಭಾಗಗಳನ್ನು ಮಾಡಿದ್ದಾರೆ. ಧಾರವಾಡ ಜಿಲ್ಲೆಯಲ್ಲಿ ೧೧, ಬೆಳಗಾವೀ ಜಿಲ್ಲೆಯಲ್ಲಿ ೭, ವಿಜಾಪುರ ಜಿಲ್ಲೆಯಲ್ಲಿ ೮, ಕಾನಡಾ ಜಿಲ್ಲೆಯಲ್ಲಿ ೮, ತಾಲೂಕುಗಳಿರುತ್ತವೆ. ತಾಲೂಕುಗಳ ಮುಖ್ಯಾಧಿಕಾರಿಗಳು ಮಾಮಲೇದಾರರು. ಇವರು ಮುಲಕೀ ಫೌಜದಾರೀ ಕೆಲಸಗಳಲ್ಲಿ ಹಳ್ಳಿಗಳ ಗೌಡರಿಗೆ ವರಿಷ್ಠಾಧಿಕಾರಿಗಳಾಗಿಯೂ, ಅಸಿಷ್ಟಾಂಟ ಕಲೆಕ್ಟರರಿಗೂ ಕಲೆಕ್ಟರರಿಗೂ ಅಂಕಿತರಾಗಿಯೂ ಕೆಲಸ ಮಾಡುತ್ತಾರೆ. ಮಾಮಲೇದಾರರು ತಮ್ಮ ತಮ್ಮ ತಾಲೂಕುಗಳ ಕಂದಾಯದ ಹಣವನ್ನು ವಸೂಲು ಮಾಡಿ ಕಲೆಕ್ಟರರ ಕಡೆಗೆ ಕಳಿಸುವದಲ್ಲದೆ, ತಮ್ಮ ಹಳ್ಳಿಗಳಲ್ಲಿ ನಡಿಯುವ ಮುಲಕೀ ಫೌಜದಾರೀ ವ್ಯಾಜ್ಯಗಳ ನಿರ್ಣಯವನ್ನು ಮಾಡುವರು. ಮಾಮಲೇದಾರರಿಗೆ ೨ನೇ ೩ನೇ ವರ್ಗದ ಮಾಜಿಸ್ತ್ರೇ

ಟನ ಅಧಿಕಾರವಿರುತ್ತದೆ. ಮಾಮಲೇದಾರರ ಸಂಬಳವು ವರ್ಷಕ್ಕೆ ೧೮೦೦ರಿಂದ ೩೦೦೦ ರೂಪಾಯಿಯ ವರೆಗೆ ಇರುತ್ತದೆ. ತಾಲೂಕು ದೊಡ್ಡದಿದ್ದಲ್ಲಿ ಅದರೊಳಗೆ ಮಹಾಲೆಂಬ ವಿಭಾಗವನ್ನು ಮಾಡಿರುತ್ತಾರೆ. ವಿಜಾಪುರ ಜಿಲ್ಲೆಯಲ್ಲಿ ೨, ಬೆಳಗಾವೀ ಜಿಲ್ಲೆಯಲ್ಲಿ ೩, ಧಾರವಾಡ ಜಿಲ್ಲೆಯಲ್ಲಿ ೩, ಕಾನಡಾ ಜಿಲ್ಲೆಯಲ್ಲಿ ೩ ಮಹಾಲುಗಳಿರುತ್ತವೆ. ಮಹಾಲಿನ ಮುಖ್ಯಾಧಿಕಾರಿಯು ಮಹಾಲಕರಿಯು. ತಾಲೂಕಿನಲ್ಲಿ ಮಾಮಲೇದಾರನು ಮಾಡುವ ಕೆಲಸಗಳನ್ನೇ ಮಹಾಲಿನಲ್ಲಿ ಮಹಾಲಕರಿಯು ಮಾಮಲೇದಾರನಿಗೆ ಅಂಕಿತನಾಗಿ ಮಾಡುತ್ತಾನೆ. ಮಹಾಲಕರಿಯ ಸಂಬಳವು ವರ್ಷಕ್ಕೆ ೭೦೦ ರೂಪಾಯಿ ಇರುತ್ತದೆ.

ಹಳ್ಳಿಯಲ್ಲಿ ಮುಲಕೀ ಫೌಜದಾರೀ ಕೆಲಸಗಳ ಅಧಿಕಾರಿಯು ಗೌಡನು. ಕೆಲವು ಕಡೆಯಲ್ಲಿ ಇವೆರಡೂ ಕೆಲಸಗಳೂ ವೊಬ್ಬನೇ ಗೌಡನ ಕೈಯಲ್ಲಿ ಇರುತ್ತವೆ; ಕೆಲವು ಕಡೆಯಲ್ಲಿ ಮುಲಕೀ ಗೌಡ ಬೇರೆ, ಫೌಜದಾರೀ ಗೌಡ ಬೇರೆ ಇರುತ್ತಾನೆ. ಒಬ್ಬ ಗೌಡನು ವೊಂದಕ್ಕಿಂತ ಹೆಚ್ಚು ಹಳ್ಳಿಗಳ ಕೆಲಸವನ್ನು ಮಾಡ ಬಹುದು. ಗೌಡನಿಗೆ ಅವನ ಭೂಮಿಯ ಮೇಲೆ ಸರಕಾರೀ ತೆರಿಗೆಯನ್ನು ಮಾಫು ಮಾಡುವದಲ್ಲದೆ, ವರ್ಷಕ್ಕೆ ೭ರಿಂದ ೧೩೦ರ ವರೆಗೆ ಸಂಬಳವೂ ಇರುತ್ತದೆ. ಗೌಡನ ಕೈ ಕೆಳಗೆ ಲೆಕ್ಕ ಬರಿಯುವ ಮನುಷ್ಯನು ಕುಲಕರಣಿ ಅಥವಾ ಶಾನಭೋಗ. ಇವನು ಗೌಡನ ಕೈ ಕೆಳಗಿನ ಕಾಮದಾರನಾದಾಗ್ಯೂ, ಯಾವತ್ತು ಸರಕಾರೀ ಕಾಗದ ಪತ್ರಗಳಿಗೆ ಗೌಡನ ಸಹಿಯಂತೆ ಕುಲಕರಣಿಯ ಸಹಿಯಾದರೂ ಅವಶ್ಯವಿರುತ್ತದೆ. ಗೌಡನು ವಿದ್ಯ ಕಲಿತವನಿರುವದು ಅಪರೂಪ; ಕುಲಕರಣಿಯು ಅಲ್ಪ ಸ್ವಲ್ಪ ಕಲಿತಕನಿರುತ್ತಾನೆ. ಈ ಕಾರಣಗಳಿಂದ ಊರೊಳಗೆ ಗೌಡನಿಗಿಂತ ಕುಲಕರಣಿಯ ಅಮಲು ಬಹುತರ ಹೆಚ್ಚು ನಡಿಯುತ್ತಿರುತ್ತದೆ. ಕುಲಕರಣಿಗೆ ಗೌಡನಂತೆಯೇ ಸರಕಾರದಿಂದ ನಗದ ಸಂಬಳವೂ ತೆರಿಗೆಯ ಮಾಫಿಯೂ ಇರುತ್ತದೆ. ಗೌಡ ಶಾನಭೋಗರ ಕೈ ಕೆಳಗೆ ತಳವಾರ, ಪಟ್ಟಣಶಟ್ಟಿ, ಹಳಬರು, ಮುಂತಾದ ಕಿರುಕುಳ ಕಾಮದಾರರಿರುತ್ತಾರೆ. ಇವರ ಭೂಮಿಗೂ ಸರಕಾರೀ ತೆರಿಗೆ ಇರುವದಿಲ್ಲ; ಅದರ ಹೊರ್ತು ಇವರಿಗೆ ವರ್ಷಕ್ಕೆ ೭ ಆಣೆಯಿಂದ ೩೦ ರೂಪಾಯಿಯ ವರೆಗೆ ಸರಕಾರೀ ನೇಮಣೂಕು ಇರುತ್ತವೆ. ತಳವಾರನು ವಸೂಲು ಮುಂತಾದ ಕೆಲಸಗಳಲ್ಲಿ ಗೌಡ ಶಾನಭೋಗರಿಗೆ ಸಹಾಯ ಮಾಡುತ್ತಾನೆ; ಪಟ್ಟಣಶಟ್ಟಿಯು ವರಿಷ್ಠಾಧಿಕಾರಿಗಳು ಬಂದಾಗ ಅವರ ಸರಬರಾಯಿಯ ಕೆಲಸಕ್ಕೆ ಸಹಾಯ ಮಾಡುತ್ತಾನೆ; ಹಳಬರು ಊರಿನ ಕಾವಲುಗಾರರಾಗಿರುತ್ತಾರೆ. ಇವರಲ್ಲದೆ ಜೋಯಿಸ, ಸೊನ್ನಗಾರ, ನಾದಿಗ, ಅಗಸ, ಮುಂತಾದ ೧೨ ಜನ ಬುಲೂತಿದಾರರು ಊರುತನದ ಕೆಲಸಕ್ಕೆ ಪೂರ್ವದಲ್ಲಿ ಸಹಾಯ ಮಾಡುತ್ತಿದ್ದರು. ಅವರ ಚಾಕರಿಯು ಈಗ ಬೇಕಾಗದಿದ್ದಾಗ್ಯೂ, ಅವರಲ್ಲಿ ಕೆಲ ಕೆಲವರಿಗೆ ಇನಾಮುಗಳು ಈಗ್ಯೂ ನಡಿಯುತ್ತವೆ. ನಾಲ್ಕೂ ಜಿಲ್ಲೆಗಳ ಊರುತನದ ಖರ್ಚಿನ ಪಟ್ಟಿಯನ್ನು ಕೆಳಗಿನ ಕೋಷ್ಟಕದಲ್ಲಿ ಕೊಟ್ಟಿದ್ದೇವೆ.

## ಊರುತನದ ಖರ್ಚಿನ ಪಟ್ಟಿ.

| ಜಿಲ್ಲೆಗಳು. | ಗೌಡ. | ಕುಲಕರಣಿ. | ನೌಕರರು. | ಒಟ್ಟು. | ಶೇಕಡಾ ಖರ್ಚು. |
|---|---|---|---|---|---|
| ಧಾರವಾಡ . . . . | ೬೬೯೦೦ | ೭೦೧೭೦ | ೬೫೯೮೦ | ೨೦೩೦೫೦ | ೧೫ |
| ಬೆಳಗಾವಿ . . . . | ೫೨೦೧೦ | ೫೭೭೪೦ | ೯೧೦೦೦ | ೨೦೦೭೫೦ | ೧೬ |
| ವಿಜಾಪುರ . . . . | ೧೦೭೯೭೦ | ೧೧೧೦೩೦ | ೧೨೯೬೯೦ | ೩೪೮೬೯೦ | ೧೭.೫ |
| ಕಾನಡಾ . . . . | ೨೧೮೭೦ | ೩೧೦೨೦ | ೧೯೯೬೦ | ೭೨೮೫೦ | ೮ |
| | ೨೪೮೭೫೦ | ೨೬೯೯೬೦ | ೩೦೬೬೩೦ | ೮೨೫೩೪೦ | ೧೪·೧ |

# ೯ನೇ ಭಾಗ.

## ನ್ಯಾಯ.

೧೮೧೮-೧೮೪೬.—ಪೇಶವನ ರಾಜ್ಯವನ್ನು ಆಕ್ರಮಿಸಿದ ಬಳಿಕ ಕೃಷ್ಣಾ, ತುಂಗಭದ್ರಾ, ಈ ಯೆರಡು ಹೊಳೆಗಳ ನಡುವಿನ ಪ್ರದೇಶಕ್ಕೆ “ದಕ್ಷಿಣ ಮಹಾರಾಷ್ಟ್ರ ದುವಾಬ” ಯೆಂಬ ಹೆಸರಿಟ್ಟು ಈ ಶೀಮೆಯನ್ನು ದಂಡಿನ ಸಹಾಯದಿಂದ ಆಕ್ರಮಿಸಿದವನಾದ ಜನರಲ್ ಮನ್ರೋ ಯೆಂಬ ದಂಡಿನ ಮುಖ್ಯಾಧಿಕಾರಸ್ಥನ ಕೈಯಲ್ಲಿ ಇದನ್ನು ಕೊಟ್ಟರು. ಅವನಿಗೆ “ಪ್ರಿನ್ಸಿಪಲ್ ಕಲೆಕ್ಟರ ಮತ್ತು ಪೋಲಿಟಿಕಲ ಏಜಂಟ”ನೆಂಬ ಪದವಿಯನ್ನು ಕೊಟ್ಟಿದ್ದರು. ಅವನು ದಿವಾಣೀ, ಫೌಜದಾರೀ, ಮುಲಕೀ, ಪೋಲೀಸ, ಈ ನಾಲ್ಕೂ ಬಗೆಯ ಅಧಿಕಾರವನ್ನು ಪೂರ್ಣವಾಗಿ ನಡಿಸುತ್ತಿದ್ದದ್ದಲ್ಲದೆ, ದಕ್ಷಿಣ ಮಹಾರಾಷ್ಟ್ರದ ಜಹಾಗೀರದಾರರಿಗೆ ವರಿಷ್ಠಾಧಿಕಾರಿಯಾಗಿದ್ದನು. ಜನರಲ್ ಮನ್ರೋನು ಧಾರವಾಡದಲ್ಲಿ ಇರುತ್ತಿದ್ದನು; ಆದ್ದರಿಂದ ಧಾರವಾಡವೇ ದಕ್ಷಿಣ ಮಹಾರಾಷ್ಟ್ರ ದುವಾಬದ ಮುಖ್ಯ ಪಟ್ಟಣವಾಗಿತ್ತು. ಈ ಶೀಮೆಯಲ್ಲಿ ಆಗ ೨೧ ತಾಲೂಕುಗಳನ್ನು ಮಾಡಿ, ವೊಂದೊಂದು ತಾಲೂಕಿಗೆ ವೊಬ್ಬೊಬ್ಬ ಮಾಮಲೇದಾರನನ್ನು ನೇಮಿಸಿದರು. ಮಾಮಲೇದಾರನ ಕೈಕೆಳಗೆ ಮೂವರಾಗಲಿ ನಾಲ್ವರು ಜಿಲ್ಲೇದಾರರೆಂಬ ಕಾರಕೂನರಿರುತ್ತಿದ್ದರು. ಅವರ ಸಹಾಯದಿಂದ ಅವನು ತನ್ನ ತಾಲೂಕಿನಲ್ಲಿ ಮುಲಕೀ, ಫೌಜದಾರೀ, ಪೋಲೀಸ ಅಧಿಕಾರಗಳನ್ನು ನಡಿಸುತ್ತಿದ್ದನು.